ನೋಡುತ್ತಿದ್ದಳು. ಅವರಿಬ್ಬರೂ ಪರಸ್ಪರ ಮಾತನಾಡುತ್ತಿರಲಿಲ್ಲ. ಬದಲಾಗಿ ಯಾವುದೋ ಸಮಸ್ಯೆಯಲ್ಲಿ ಸಿಲುಕಿದಂತೆ ಅವರ ಮುಖದ ಮೇಲೆ ಮ್ಲಾನತೆ. ಆ ಹುಡುಗ 'ನನ್ನ ಮೇಲೆ ಭರವಸೆ ಇಡು, ಇಂದಲ್ಲ ನಾಳೆ ಪರಿಸ್ಥಿತಿ ಸರಿಯಾಗುತ್ತದೆ' ಎನ್ನುವ ಭರವಸೆ ಕೊಡುತ್ತಿದ್ದ ಹಾಗೆ ಅವಳ ಮುಖವನ್ನು ಆಗಾಗ ದಿಟ್ಟಿಸುತ್ತಿದ್ದ.

ನಾಡಪ್ರಭು ಕೆಂಪೇಗೌಡ ನಿಲ್ದಾಣದಲ್ಲಿ ಮೆಟ್ರೊ ಒಂದು ಕ್ಷಣ ಹೆಚ್ಚೇ ನಿಲ್ಲುತ್ತದೆ. ಹೊರಡುವ ಸಂಜ್ಞೆಯನ್ನು ತೋರಿಸಿ ಬಾಗಿಲು ಮುಚ್ಚಿದಾಗ ಒಳಗೆ ಎಷ್ಟು ಸಾಧ್ಯವೋ ಅಷ್ಟು ಜನರು ಒತ್ತೊತ್ತಾಗಿ ನಿಂತಿದ್ದರು. ನನ್ನೆದುರಿನ ದಡಿಯರ ಹಿಂದೆ ನಿಂತ ಆ ತರುಣಿ ಒದ್ದಾಡುತ್ತಿದ್ದಳು. ತೆಳ್ಳನೆಯ ಹುಡುಗಿ. ಒಂದು ಕೈಯನ್ನು ಮೇಲಿನ ಕಂಬಿಗೆ ಆತು ಹಿಡಿದುಕೊಂಡಿದ್ದ ಆಕೆ ಬೂದು ಬಣ್ಣದ ಉದ್ದ ಕೈಯ ಜರ್ಕಿನ್ ಹಾಕಿಕೊಂಡಿದ್ದಳು. ಕ್ರೀಮ್ ಕಲರಿನ ಸುಕ್ಕಿಲ್ಲದ ಪ್ಯಾಂಟ್. ಒಪ್ಪವಾಗಿ ಹೆಣೆದ ಚಿಕ್ಕ ಜಡೆ. ಬಿಸಿಲಿಗೆ ಬಿದ್ದು ಕಪ್ಪಗಾದ ಮುಖ. ಮುಖದ ತುಂಬ ಬೆವರು. ಜರ್ಕಿನ್ನ ಒಳಗಿದ್ದ ಅವಳ ಶರಟಿನ ಕಾಲರ್ ಕೊರಳನ್ನೆಲ್ಲ ಮುಚ್ಚಿಕೊಂಡಿತ್ತು. ಆಕೆಯ ಹಿಂದುಮುಂದೆಲ್ಲ ಜನರು ಒತ್ತಾಗಿ ನಿಂತಿದ್ದುದರಿಂದ ಆಕೆಗೆ ನಿಲ್ಲುವುದೂ ಕಷ್ಟವಾಗಿತ್ತು.

ಮುಂದಿನ ಎರಡನೆಯ ನಿಲ್ದಾಣದಲ್ಲಿ ನಾನು ಇಳಿಯ ಬೇಕಾಗಿರುವುದರಿಂದ ನಾನು ದಡಿಯರ ನಡುವೆ ಕೈ ಚಾಚಿ ಆಕೆಗೆ ಕೂರಲು ಆಹ್ವಾನಿಸಿ ಎದ್ದು ನಿಂತೆ. ಆಕೆ ಅವರ ಮಧ್ಯೆ ಜಾಗ ಮಾಡಿ ನನ್ನತ್ತ ಕೃತಜ್ಞತೆಯ ದೃಷ್ಟಿ ಹಾಯಿಸಿ ಕೂರಬೇಕು ಅನ್ನುವಷ್ಟರಲ್ಲಿ, ಪಕ್ಕದಲ್ಲಿ ಕೂತ ಜೋಡಿಯ ಎದುರು ನಿಂತಿದ್ದ ಇನ್ನೊಬ್ಬ ಹೆಣ್ಣು ಮಗಳು ಕೈ ಚಾಚಿ ನಾನು ಕೂತ ಸೀಟಿನಲ್ಲಿ ಕೂತೇ ಬಿಟ್ಟಳು. ಅವಳನ್ನು ನಾನು ಅಲ್ಲಿಯ ತನಕ ಗಮನಿಸಿರಲಿಲ್ಲ. ನೋಡಿದರೆ ಬಸುರಿ. ಒಂದಿಷ್ಟು ಅನೀಮಿಕ್. ಪ್ಯಾಂಟ್‌ಧಾರಿ ಹುಡುಗಿಗೆ ನಿರಾಸೆಯಾದರೂ ಬಸುರಿ ಹುಡುಗಿಯೇ ಕೂರಲಿ ಎಂದು ನನ್ನತ್ತ ನೋಡಿ ಮುಗುಳುನಕ್ಕಳು. ನಾನು ಸುಮ್ಮನೆ ಭುಜ ಹಾರಿಸಿಕೊಂಡೆ.

ಮೆಟ್ರೊ ಓಡುತ್ತಿತ್ತು. 'ಮುಂದಿನ ನಿಲ್ದಾಣ, ಮಂತ್ರಿ ಸ್ಕ್ವೇರ್' ಎಂದು ದ್ವಿಭಾಷೆಯಲ್ಲಿ ಪ್ರಕಟಣೆ ಕೇಳಿಸಿತು. ನನ್ನ ಮತ್ತು ಆ ಪ್ಯಾಂಟ್‌ಧಾರಿ ಹುಡುಗಿಯ ನಡುವೆ ಇಬ್ಬರೋ ಮೂವರೋ ನಿಂತಿದ್ದರು. ನಾನು ನನ್ನ ನಿಲ್ದಾಣ ಬರುವುದರಲ್ಲಿಯೇ ಮನಸ್ಸನ್ನು ತೊಡಗಿಸಿಕೊಂಡಿದ್ದೆ. ಇದ್ದಕ್ಕಿದ್ದಂತೆ ಆಕೆ ನನ್ನನ್ನುದ್ದೇಶಿಸಿ, 'ನೀವೇನು ಮಾಡ್ತಾ ಇದ್ದೀರಿ, ಸರ್?' ಎಂದು ಕೇಳಿದಳು!

ಪ್ರಶ್ನೆ ಅನಿರೀಕ್ಷಿತವಾಗಿತ್ತು. ನನಗೆ ಆಕೆ ಏನು ಮತ್ತು ಯಾಕೆ ಕೇಳುತ್ತಿದ್ದಾಳೆ ಎಂದು ತಿಳಿಯದೆ ಅವಳ ಮುಖವನ್ನೇ ನೋಡಿದೆ. ಆಕೆ, 'ಅಂದ್ರೆ ಯಾವ ಡಿಪಾರ್ಟ್‌ಮೆಂಟಿನಲ್ಲಿದ್ದೀರಿ ಅಂತ?' ಎಂದಳು. ನಾನು, 'ಓಹ್' ಎಂದುದ್ಗರಿಸಿದೆ. 'ಇಲ್ಲ, ನಾನೆಲ್ಲೂ ಕೆಲಸ ಮಾಡುತ್ತಿಲ್ಲ.'

ಅವಳು 'ರಿಟಾಯರ್ಡ್ ಆಗಿದ್ದೀರಾ?' ಎಂದು ಮತ್ತೆ ಕೇಳಿದಳು.

'ನಾನೊಬ್ಬ ಲೇಖಕ. ಕನ್ನಡದಲ್ಲಿ ಬರೀತೀನಿ. ಸ್ವತಂತ್ರ ಜೀವಿ' ಎಂದೆ. 'ಯಾಕೆ?' ಎಂದು ಕೇಳಿದೆ.

'ಸಾಧಾರಣವಾಗಿ ಪೊಲೀಸ್‌ನೋರಿಗೆ ಯಾರೂ ಎದ್ದು ಸೀಟು ಕೊಡಲ್ಲ. ಡಿಪಾರ್ಟ್‌ಮೆಂಟಿನವರು ಮಾತ್ರ ಕೊಡುವುದಿದೆ. ನನ್ನ ಡ್ರೆಸ್ ನೋಡಿ ನೀವೂ ಪೊಲೀಸ್ ಇಲಾಖೆಯಲ್ಲಿದ್ದವರೇನೋ ಅಂತ ಕೇಳಿದೆ' ಎಂದಳವಳು.

ನನಗೆ ಅವಳು ಪೊಲೀಸ್ ಎಂದು ಗೊತ್ತಾದದ್ದೇ ಆಗ! ಅವಳ ಪ್ಯಾಂಟ್ ಕ್ರೀಂ ಕಲರಿನದ್ದು